## ನೀರು ಸಂರಕ್ಷಣೆ: ಕೆಎಲ್‌ಎಸ್ ವಿಡಿಐಟಿಯಲ್ಲಿ ವಿಶೇಷ ಉಪನ್ಯಾಸ

# ಜೀವಜಲ ಅಪವ್ಯಯವಾಗದಂತೆ ಬಳಸುವುದು ನಮ್ಮ ಕರ್ತವ್ಯ

● **ತತ್ತ್ವನಿಷ್ಠ, ಹಳಿಯಾಳ:** ಕೆಎಲ್‌ಎಸ್ ವಿ.ಡಿ.ಐ.ಟಿ ಮಹಾವಿದ್ಯಾಲಯದ ಸಿವಿಲ್ ವಿಭಾಗದ ವತಿಯಿಂದ ನೀರು ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಅಲ್ಟ್ರಾಟೆಕ್ ಸಿಮೆಂಟ್ ಉತ್ತರ ಕರ್ನಾಟಕ ಹಾಗೂ ಗೋವಾ ಭಾಗದ ತಾಂತ್ರಿಕ ಮುಖ್ಯಸ್ಥ ಅಶೋಕ ರೆಡ್ಡಿ ಕೊಲ್ಲೂರ್ ಭಾಗವಹಿಸಿ ಮಾತನಾಡಿದರು. ನೀರು ಅತ್ಯಮೂಲ್ಯವಾದ ಸಂಪತ್ತಾಗಿದ್ದು, ಅದನ್ನು ಜಾಗರೂಕತೆಯಿಂದ ಹಾಗೂ ಅಪವ್ಯಯವಾಗದಂತೆ ಬಳಸಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯ ಎಂದು ಹೇಳಿದರು.

ನೀರಿನ ಸಂರಕ್ಷಣೆಗೆ ಬಳಕೆಯಾಗುತ್ತಿರುವ ನೂತನ ತಂತ್ರಜ್ಞಾನಗಳ ಕುರಿತು ಮಾಹಿತಿ ನೀಡಿದ ಅವರು, ಕೊಳಚೆ ನೀರಿನ ಮರುಶುದ್ಧೀಕರಣ ಹಾಗೂ ಅದರ ಸಮರ್ಪಕ ಬಳಕೆಯ ಅಗತ್ಯತೆಯನ್ನು ವಿವರಿಸಿದರು. ಜೊತೆಗೆ ಭೂಮಿಯಲ್ಲಿ ಅಂತರ್ಜಲ ಮಟ್ಟ ಹೆಚ್ಚಿಸಲು





ಕೈಗೊಳ್ಳಬೇಕಾದ ವಿವಿಧ ಉಪಕ್ರಮಗಳ ಕುರಿತು ಬೆಳಕು ಚೆಲ್ಲಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ, ಮಹಾವಿದ್ಯಾಲಯದಲ್ಲಿ ಅಂತರ್ಜಲ ಸಮೃದ್ಧೀಕರಣಕ್ಕಾಗಿ ಮಳೆನೀರು ಕೊಯ್ಲು ವ್ಯವಸ್ಥೆಯನ್ನು ಅಳವಡಿಸಿಕೊಂಡಿರುವುದಾಗಿ ತಿಳಿಸಿದರು.

ಇದೇ ಸಂದರ್ಭದಲ್ಲಿ ಕಾಂಕ್ರೀಟ್ ಟೆಕ್ನಾಲಜಿ ವಿಷಯದಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿ ಅಭಿಷೇಕ್ ಯಂತೂರ್ ಅವರನ್ನು ಅಲ್ಟ್ರಾಟೆಕ್ ವತಿಯಿಂದ ಸನ್ಮಾನಿಸಲಾಯಿತು.

ಅಲ್ಟ್ರಾಟೆಕ್ ಸಿಮೆಂಟ್‌ನ ಗಿರೀಶ್ ಪವಾರ್ ಹಾಗೂ ಪ್ರಸನ್ನ ಉಪ್ಪಿನ್ ಉಪಸ್ಥಿತರಿದ್ದರು. ವಿಭಾಗ ಮುಖ್ಯಸ್ಥ ಪ್ರೊ. ಹರ್ಷ ಜಾಧವ ಸ್ವಾಗತಿಸಿದರು. ಡಾ. ಸ್ನೇಹಾ ಕುಲಕರ್ಣಿ ಹಾಗೂ ಪ್ರೊ. ಸೀಮಾ ಬಸರಿಕಟ್ಟಿ ಕಾರ್ಯಕ್ರಮ ಸಂಯೋಜಿಸಿದರು. ಕಾರ್ಯಕ್ರಮದಲ್ಲಿ 180ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಇಂಜಿನಿಯರಿಂಗ್ ಕಾಲೇಜಿನ ಸಿವಿಲ್ ವಿಭಾಗದಿಂದ ನೀರು ಸಂರಕ್ಷಣೆ ಜಾಗೃತಿ ಕಾರ್ಯಕ್ರಮ

# ಜಲಮೂಲಗಳ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ

**ಹಳಿಯಾಳ:** ಪ್ರತಿ ಜೀವಿಗೂ ಕುಡಿಯುಲು ನೀರು ಬೇಕು, ಹೀಗಾಗಿ ಜಲಮೂಲಗಳ ಸಂರಕ್ಷಣೆ ಮಾಡುವುದು ಹಾಗೂ ನೀರು ಪೋಲು ಆಗದಂತೆ ನೋಡಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯ ಹಾಗೂ ಜವಾಬ್ದಾರಿಯಾಗಿದೆ ಎಂದು ಅಲ್ಟ್ರಾಟೇಕ್ ಸಿಮೆಂಟ್ ಪ್ರೈ ಲಿಮಿಟೆಡನ ಉತ್ತರ ಕರ್ನಾಟಕ ಹಾಗೂ ಗೋವಾ ಭಾಗದ ತಾಂತ್ರಿಕ ಮುಖ್ಯಸ್ಥ ಅಶೋಕ ರೆಡ್ಡಿ ಕೊಲ್ಲೂರ ಹೇಳಿದರು.

ಗುರುವಾರ ಪಟ್ಟಣದ ಕೆ.ಎಲ್.ಎಸ್ ಸಂಸ್ಥೆಯ ವಿ.ಡಿ.ಐ.ಟಿ ಇಂಜಿನಿಯರಿಂಗ್ ಕಾಲೇಜಿನ ಸಿವಿಲ್ ವಿಭಾಗದವರು "ನೀರು ಸಂರಕ್ಷಣೆ" ಕುರಿತು ಆಯೋಜಿಸಿದ ಅರಿವು ಮೂಡಿಸುವ ಕಾರ್ಯಾಕ್ರಮದಲ್ಲಿ ಮಾತನಾಡಿದರು.

ಪರಿಸರ ಬದಲಾವಣೆಯಿಂದಾಗಿ ವರ್ಷದಿಂದ ವರ್ಷಕ್ಕೆ ಮಳೆಯ ಪ್ರಮಾಣ ಕಡಿಮೆಯಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇದರಿಂದ ನೀರಿನ ಸಮಸ್ಯೆಯು ಎದುರಾಗುತ್ತಿದೆ. ಭೂಮಿಯ ಮೇಲೆ ಲಭ್ಯವಿರುವ ನೀರಿನ ಪ್ರಮಾಣದಲ್ಲಿ ಶೇ.3ರಷ್ಟು ಮಾತ್ರ ಮಾತ್ರ ಕುಡಿಯುವದಕ್ಕೆ ಯೋಗ್ಯವಾಗಿದೆ. ಅದಕ್ಕಾಗಿ ನೀರನ್ನು ಹಿತಮಿತವಾಗಿ ಬಳಕೆ ಮಾಡಬೇಕು, ಅದರ ಜೊತೆಯಲ್ಲಿ ಜಲಮೂಲಗಳ ಸಂರಕ್ಷಣೆ ಮಾಡಲು ಸಾರ್ವಜನಿಕರಿಗೆ ತಿಳುವಳಿಕೆ ನೀಡಲು ಮುಂದಾಗಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಕಾಲೇಜಿನ ಪ್ರಾಚಾರ್ಯ ಡಾ.ವಿ.ಎ.ಕುಲಕರ್ಣಿ ಮಾತನಾಡಿ,



**ಕೆ.ಎಲ್.ಎಸ್ ಸಂಸ್ಥೆಯ ವಿ.ಡಿ.ಐ.ಟಿ ಇಂಜಿನಿಯರಿಂಗ್ ಕಾಲೇಜಿನ ಸಿವಿಲ್ ವಿಭಾಗದವ ವತಿಯಿಂದ "ನೀರು ಸಂರಕ್ಷಣೆ" ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ನಡೆಯಿತು.**

ಮಾನವನ ದುರಾಸೆಗೆ ಇಂದು ಪರಿಸರ ನಾಶವಾಗುತ್ತಿದೆ, ಇದರ ಪರಿಣಾಮ ಮಳೆಯ ಪ್ರಮಾಣ ಕುಂಠಿತಗೊಂಡು ಬೆಳೆಯಿಲ್ಲದೇ ಜನ-ಜಾನುವಾರುಗಳು, ಆಹಾರ ಮತ್ತು ನೀರಿಗೆ ಹಾಹಾಕಾರದ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕಾಗಿ ಹನಿ ಹನಿ ನೀರನ್ನು ಕಾಪಾಡಿ ಸದ್ಬಳಕೆ ಮಾಡಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದರು.

ಈಗಲೇ ನಾವು ನೀರಿಗಾಗಿ ಎಚ್ಚೆತ್ತು ಕೊಳ್ಳದಿದ್ದರೇ ಮುಂದಿನ ದಿನಗಳಲ್ಲಿ ನೀರಿಗಾಗಿ ಯುದ್ಧ ಮಾಡುವ ಪ್ರಸಂಗ ಬರಬಹುದೆಂದು ಎಚ್ಚರಿಸಿದರು. ಕಾಲೇಜಿನಲ್ಲಿ ಅಂತರ್ಜಲ ಸಮೃದ್ಧಿಕರಣಕ್ಕಾಗಿ ಮಳೆ ಕೊಯ್ಲು ವಿಧಾನವನ್ನು ಅಳವಡಿಸಿಕೊಳ್ಳಲಾಗಿದ್ದು, ನೀರಿನ ಸದ್ಬಳಕೆಯ ಬಗ್ಗೆ ನಾವು ಜಾಗೃತೆಯನ್ನು ವಹಿಸಿದ್ದೆವೆ ಎಂದರು,

ಅಲ್ಟ್ರಾಟೇಕ್ ಸಿಮೆಂಟಿನ ಗಿರೀಶ್ ಪವಾರ್ ಹಾಗೂ ಪ್ರಸನ್ನ ಉಪ್ಪೀನ್ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಕಾಂಕ್ರೀಟ್ ಟೆಕ್ನಾಲಜಿ ವಿಷಯದಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ ಅಭಿಷೇಕ್ ಯಂತೂರ ಅವರನ್ನು ಅಲ್ಟ್ರಾಟೇಕ್ ವತಿಯಿಂದ ಗೌರವಿಸಲಾಯಿತು.

ಸಿವಿಲ್ ವಿಭಾಗ ಮುಖ್ಯಸ್ಥ ಪ್ರೊ.ಹರ್ಷ ಜಾಧವ, ಡಾ.ಸ್ನೇಹಾ ಕುಲಕರ್ಣಿ ಮತ್ತು ಪ್ರೊ.ಸೀಮಾ ಬಸರಿಕಟ್ಟಿ ಕಾರ್ಯಕ್ರಮ ಸಂಯೋಜಿಸಿದ್ದರು. ಕಾಲೇಜಿನ 180ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರಯೋಜನ ಪಡೆದುಕೊಂಡರು.

# ನೀರು ಪೋಲಾಗದಂತೆ ನೋಡಿಕೊಳ್ಳಿ: ಅಶೋಕ

## ನೀರು ಸಂರಕ್ಷಣೆ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ



ನೀರು ಸಂರಕ್ಷಣೆ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ನಡೆಯಿತು.

• **ಕನ್ನಡಪ್ರಭ ವಾರ್ತೆ** ಹಳಿಯಾಳ

ಪರಿಸರ ಬದಲಾವಣೆಯಿಂದಾಗಿ ವರ್ಷದಿಂದ ವರ್ಷಕ್ಕೆ ಮಳೆಯ ಪ್ರಮಾಣ ಕಡಿಮೆಯಾಗುತ್ತಿರುವುದನ್ನು ನಾವು ಕಾಣುತ್ತಿದ್ದು, ಇದರಿಂದ ನೀರಿನ ಸಮಸ್ಯೆಯು ಎದುರಾಗುತ್ತಿದೆ. ಅದಕ್ಕಾಗಿ ನೀರನ್ನು ಹಿತಮಿತವಾಗಿ ಬಳಕೆ ಮಾಡಬೇಕು. ಅದರ ಜೊತೆಯಲ್ಲಿ ಜಲಮೂಲಗಳ ಸಂರಕ್ಷಣೆ ಮಾಡಲು ಸಾರ್ವಜನಿಕರಿಗೆ ತಿಳುವಳಿಕೆ ನೀಡಲು ಮುಂದಾಗಬೇಕು ಎಂದು ಅಲ್ಟ್ರಾಟೇಕ್ ಸಿಮೆಂಟ್ ಪ್ರೈ ಲಿಮಿಟೆಡನ ಉತ್ತರ ಕರ್ನಾಟಕ ಹಾಗೂ ಗೋವಾ ಭಾಗದ ತಾಂತ್ರಿಕ ಮುಖ್ಯಸ್ಥ ಅಶೋಕ ರೆಡ್ಡಿ ಕೊಲ್ಲೂರ ಹೇಳಿದರು.

ಗುರುವಾರ ಪಟ್ಟಣದ ಕೆ.ಎಲ್.ಎಸ್ ಸಂಸ್ಥೆಯ ವಿ.ಡಿ.ಐ.ಟಿ ಎಂಜಿನಿಯರಿಂಗ್ ಕಾಲೇಜಿನ ಸಿವಿಲ್ ವಿಭಾಗದವರು ನೀರು ಸಂರಕ್ಷಣೆ ಕುರಿತು ಆಯೋಜಿಸಿದ ಅರಿವು ಮೂಡಿಸುವ ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿದರು.

ಇತ್ತೀಚಿನ ವರ್ಷಗಳಲ್ಲಿ ನೀರು ಸಂರಕ್ಷಣೆಗಾಗಿ ಮಾಡಿರುವ ನೂತನ ಅವಿಷ್ಕಾರ ಹಾಗೂ ತಂತ್ರಜ್ಞಾನಗಳ ಬಗ್ಗೆ ತಿಳಿಸಿದ ಅವರು, ಕೊಳಚೆನೀರಿನಮರುಶುದ್ಧೀಕರಣ ಬಗ್ಗೆ ಮಾತನಾಡಿ, ಭೂಮಿಯಲ್ಲಿ ಅಂತರ್ಜಲ ಹೆಚ್ಚಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ ಮಾತನಾಡಿ, ಮಾನವನ ದುರಾಸೆಗೆಇಂದುಪರಿಸರನಾಶವಾಗುತ್ತಿದೆ, ಇದರ ಪರಿಣಾಮ ಮಳೆಯ ಪ್ರಮಾಣ ಕುಂಠಿತಗೊಂಡು ಬೆಳೆಯಿಲ್ಲದೇ ಜನ-ಜಾನುವಾರುಗಳು, ಆಹಾರ ಮತ್ತು ನೀರಿಗೆ ಹಾಹಾಕಾರದ ಪರಿಸ್ಥಿತಿ ನಿರ್ಮಾಣವಾಗಿರುವುದನ್ನು ಕಾಣುತ್ತೇವೆ. ಅದಕ್ಕಾಗಿ ಹನಿ ಹನಿ ನೀರನ್ನು ಕಾಪಾಡಿ ಸದ್ಬಳಕೆ ಮಾಡಿಕೊಳ್ಳುವುದು ಪ್ರತಿಯೊಬ್ಬ ಮಾನವನ ಆದ್ಯ ಕರ್ತವ್ಯವಾಗಿದೆ ಎಂದರು.

> **ಭೂಮಿಯ ಮೇಲೆ ಲಭ್ಯವಿರುವ ನೀರಿನ ಪ್ರಮಾಣದಲ್ಲಿ ಶೇ.3ರಷ್ಟು ಮಾತ್ರ ಮಾತ್ರ ಕುಡಿಯುವುದಕ್ಕೆ ಯೋಗ್ಯವಾಗಿದೆ. ಪ್ರತಿ ಜೀವಿಗೂ ಕುಡಿಯುಲು ನೀರು ಬೇಕು, ಹೀಗಾಗಿ ಜಲಮೂಲಗಳ ಸಂರಕ್ಷಣೆ ಮಾಡುವುದು ಹಾಗೂ ನೀರು ಪೋಲು ಆಗದಂತೆ ನೋಡಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯ.**
>
> • **ಅಶೋಕ ರೆಡ್ಡಿ ಕೊಲ್ಲೂರ**
> ಅಲ್ಟ್ರಾಟೇಕ್ ಸಿಮೆಂಟ್ ಪ್ರೈ ಲಿಮಿಟೆಡನ ಉತ್ತರ ಕರ್ನಾಟಕ ಹಾಗೂ ಗೋವಾ ಭಾಗದ ತಾಂತ್ರಿಕ ಮುಖ್ಯಸ್ಥ

ಈಗಲೇ ನಾವು ನೀರಿಗಾಗಿ ಎಚ್ಚೆತ್ತುಕೊಳ್ಳದಿದ್ದರೇ ಮುಂದಿನ ದಿನಗಳಲ್ಲಿ ನೀರಿಗಾಗಿ ಯುದ್ಧ ಮಾಡುವಂತಹ ಪ್ರಸಂಗಗಳ ಬರಬಹುದೆಂದು ಎಚ್ಚರಿಸಿದರು. ಕಾಲೇಜಿನಲ್ಲಿ ಅಂತರ್ಜಲ ಸಮೃದ್ಧಿಕರಣಕ್ಕಾಗಿ ಮಳೆ ಕೊಯ್ಲು ವಿಧಾನವನ್ನು ಅಳವಡಿಸಿಕೊಳ್ಳಲಾಗಿದ್ದು, ನೀರಿನ ಸದ್ಬಳಕೆಯ ಬಗ್ಗೆ ನಾವು ಜಾಗೃತಿ ವಹಿಸಿದ್ದೇವೆ ಎಂದರು.

ಅಲ್ಟ್ರಾಟೇಕ್ ಸಿಮೆಂಟಿನ ಗಿರೀಶ್ ಪವಾರ್‌ಹಾಗೂ ಪ್ರಸನ್ನ ಉಪ್ಪೀನ್ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಕಾಂಕ್ರೀಟ್ ಟೆಕ್ನಾಲಜಿ ವಿಷಯದಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ ಅಭಿಷೇಕ್ ಯಂತೂರ ಅವರನ್ನು ಅಲ್ಟ್ರಾಟೇಕ್ ವತಿಯಿಂದ ಗೌರವಿಸಲಾಯಿತು.

ಸಿವಿಲ್ ವಿಭಾಗ ಮುಖ್ಯಸ್ಥ ಪ್ರೊ. ಹರ್ಷ ಜಾಧವ, ಡಾ. ಸ್ನೇಹಾ ಕುಲಕರ್ಣಿ ಮತ್ತು ಪ್ರೊ. ಸೀಮಾ ಬಸರಿಕಟ್ಟಿ ಕಾರ್ಯಕ್ರಮ ಸಂಯೋಜಿಸಿದ್ದರು. ಕಾಲೇಜಿನ 180ಕ್ಕೂ ಹೆಚ್ಚು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡರು.

# ನೀರು ಸಂರಕ್ಷಣೆ ತಜ್ಞ ಉಪನ್ಯಾಸ ಯಶಸ್ವಿ

**ಹಳಿಯಾಳ :** ಕೆಎಲ್‌ಎಸ್ ವಿಡಿಐಟಿ ಹಳಿಯಾಳದ ಸಿವಿಲ್ ವಿಭಾಗವು ನೀರು ಸಂರಕ್ಷಣೆ ಕುರಿತಾಗಿ ಅರಿವು ಮೂಡಿಸುವ ಕಾರ್ಯಕ್ರಮ ಗುರುವಾರ ಹಮ್ಮಿಕೊಂಡಿತ್ತು. ಸಂಪನ್ಮೂಲ ವ್ಯಕ್ತಿಯಾಗಿ ಅಲ್ಟ್ರಾಟೆಕ್ ಸಿಮೆಂಟ್ ಪ್ರೈ. ಲಿ ನ ಉಕ ಹಾಗೂ ಗೋವಾ ಭಾಗದ ತಾಂತ್ರಿಕ ಮುಖ್ಯಸ್ಥ ಅಶೋಕ ರೆಡ್ಡಿ ಕೊಲ್ಲೂರ್ ಆಗಮಿಸಿದ್ದರು. ನೀರು ಅತ್ಯಮೂಲ್ಯ ಸಂಪತ್ತಾಗಿದ್ದು, ಜಾಗರುಕತೆಯಿಂದ ಅಪವ್ಯಯ ವಾಗದಂತೆ ಬಳಸಬೇಕು ಎಂದರು.

ನೀರಿನ ಸಂರಕ್ಷಣೆ ಗೆ ಬಳಕೆ ಮಾಡಲಾಗುತ್ತಿರುವ ನೂತನ ತಂತ್ರಜ್ಞಾನದ ಕುರಿತಾಗಿ ತಿಳಿಸಿದರು. ಕೊಳಚೆ ನೀರಿನ ಮರುಶುದ್ದಿಕರಣ ಹಾಗೂ ಸಮರ್ಪಕ ಬಳಕೆ ತಿಳಿಸುತ್ತ, ಭೂಮಿಯಲ್ಲಿ ಅಂತರ್ಜಲ ಹೆಚ್ಚಿಸಲು ತೆಗೆದುಕೊಳ್ಳಬೇಕಾದ ಉಪಕ್ರಮದ ಕುರಿತಾಗಿ ಬೆಳಕು ಚೆಲ್ಲಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾ. ಡಾ. ವಿ.ಎ ಕುಲಕರ್ಣಿ ಮಹಾವಿದ್ಯಾಲಯವು ಅಂತರ್ಜಲ ಸಮೃದ್ಧಿಕರಣಕ್ಕೆ ಮಳೆ ಕೊಯ್ಲು ಅಳವಡಿಸಿ ಕೊಂಡಿದೆ ಎಂದರು. ಅಲ್ಟ್ರಾಟೇಕ್ ಸಿಮೆಂಟ್ ನ ಗಿರೀಶ್ ಪವಾರ್ ಹಾಗೂ ಪ್ರಸನ್ನ



ಉಪ್ಪಿನ್ ಉಪಸ್ಥಿತರಿದ್ದರು.

ಕಾಂಕ್ರೀಟ್ ಟೆಕ್ನಾಲಜಿ ವಿಷಯದಲ್ಲಿ ಅತೀ ಹೆಚ್ಚು ಅಂಕಗಳಿಸಿದ ಅಭಿಷೇಕ್ ಯಂತೂರ್ ಗೆ ಅಲ್ಟ್ರಾಟೇಕ್ ವತಿಯಿಂದ ಇದೇ ಸಂಧರ್ಭದಲ್ಲಿ ಸನ್ಮಾನಿಸಲಾಯಿತು.

ವಿಭಾಗ ಮುಖ್ಯಸ್ಥ ಪ್ರೊ. ಹರ್ಷ ಜಾಧವ ಸ್ವಾಗತಿಸಿದರು. ಡಾ ಸ್ನೇಹಾ ಕುಲಕರ್ಣಿ ಮತ್ತು ಪ್ರೊ. ಸೀಮಾ ಬಸರಿಕಟ್ಟಿ ಕಾರ್ಯಕ್ರಮ ಸಂಯೋಜಿಸಿದ್ದರು. 180ಕ್ಕೂ ಅಧಿಕ ವಿದ್ಯಾರ್ಥಿಗಳು ಈ ಉಪಸ್ಥಿತರಿದ್ದರು.

# ನೀರು ಸಂರಕ್ಷಣೆ ತಜ್ಞ ಉಪನ್ಯಾಸ ಕಾರ್ಯಕ್ರಮ ಯಶಸ್ವಿ




**ಕೊಂಕಣವಾಹಿನಿ ನ್ಯೂಸ್**

**ಹಳಿಯಾಳ :** ಕೆಎಲ್ಎಸ್ ವಿಡಿಐಟಿ ಹಳಿಯಾಳದ ಸಿವಿಲ್ ವಿಭಾಗವು ನೀರು ಸಂರಕ್ಷಣೆ ಕುರಿತಾಗಿ ಅರಿವು ಮೂಡಿಸುವ ಕಾರ್ಯಕ್ರಮವನ್ನು ಮೇ 7 ರಂದು ಹಮ್ಮಿಕೊಂಡಿತ್ತು. ಸಂಪನ್ಮೂಲ ವ್ಯಕ್ತಿಯಾಗಿ ಅಲ್ಟ್ರಾಟೆಕ್ ಸಿಮೆಂಟ್ ಪ್ರೈ. ಲಿ ನ ಉತ್ತರ ಕರ್ನಾಟಕ ಹಾಗೂ ಗೋವಾ ಭಾಗದ ತಾಂತ್ರಿಕ ಮುಖ್ಯಸ್ಥ ಅಶೋಕ ರೆಡ್ಡಿ ಕೊಲ್ಲೂರ್ ಆಗಮಿಸಿದ್ದರು. ನೀರು ಅತ್ಯಮೂಲ್ಯ ಸಂಪತ್ತಾಗಿದ್ದು, ಜಾಗರುಕತೆಯಿಂದ ಅಪವ್ಯಯ ವಾಗದಂತೆ ಬಳಸಬೇಕು ಎಂದರು. ನೀರಿನ ಸಂರಕ್ಷಣೆ ಗೆ ಬಳಕೆ ಮಾಡಲಾಗುತ್ತಿರುವ ನೂತನ ತಂತ್ರಜ್ಞಾನದ ಕುರಿತಾಗಿ ತಿಳಿಸಿದರು. ಕೊಳಚೆ ನೀರಿನ ಮರುಶುದ್ದಿಕರಣ ಹಾಗೂ ಸಮರ್ಪಕ ಬಳಕೆ ತಿಳಿಸುತ್ತ, ಭೂಮಿಯಲ್ಲಿ ಅಂತರ್ಜಲ ಹೆಚ್ಚಿಸಲು ತೆಗೆದುಕೊಳ್ಳಬೇಕಾದ ಉಪಕ್ರಮದ ಕುರಿತಾಗಿ ಬೆಳಕು ಚೆಲ್ಲಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ಮಹಾವಿದ್ಯಾಲಯವು ಅಂತರ್ಜಲ ಸಮೃದ್ಧಿಕರಣಕ್ಕೆ ಮಳೆ ಕೊಯ್ಲು ಅಳವಡಿಸಿ ಕೊಂಡಿದೆ ಎಂದರು.

ಅಲ್ಟ್ರಾಟೇಕ್ ಸಿಮೆಂಟ್ ನ ಗಿರೀಶ್ ಪವಾರ್ ಹಾಗೂ ಪ್ರಸನ್ನ ಉಪ್ಪಿನ್ ಉಪಸ್ಥಿತರಿದ್ದರು. ಕಾಂಕ್ರೀಟ್ ಟೆಕ್ನಾಲಜಿ ವಿಷಯದಲ್ಲಿ ಅತೀ ಹೆಚ್ಚು ಅಂಕಗಳಿಸಿದ ಅಭಿಷೇಕ್ ಯಂತೂರ್ ಗೆ ಅಲ್ಟ್ರಾಟೇಕ್ ವತಿಯಿಂದ ಇದೇ ಸಂಧರ್ಭದಲ್ಲಿ ಸನ್ಮಾನಿಸಲಾಯಿತು.

ವಿಭಾಗ ಮುಖ್ಯಸ್ಥ ಪ್ರೊ. ಹರ್ಷ ಜಾಧವ ಸ್ವಾಗತಿಸಿದರು. ಡಾ ಸ್ನೇಹಾ ಕುಲಕರ್ಣಿ ಮತ್ತು ಪ್ರೊ. ಸೀಮಾ ಬಸರಿಕಟ್ಟಿ ಕಾರ್ಯಕ್ರಮ ಸಂಯೋಜಿಸಿದ್ದರು. 180ಕ್ಕೂ ಅಧಿಕ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ನೀರು ಸಂರಕ್ಷಣೆ ತಜ್ಞ ಉಪನ್ಯಾಸ ಕಾರ್ಯಕ್ರಮ ಯಶಸ್ವಿ

ಲೋಕಸುದ್ದಿ, **ಹಳಿಯಾಳ:** ಕೆಎಲ್‌ಎಸ್ ವಿಡಿಐಟಿ ಹಳಿಯಾಳದ ಸಿವಿಲ್ ವಿಭಾಗವು ನೀರು ಸಂರಕ್ಷಣೆ ಕುರಿತಾಗಿ ಅರಿವು ಮೂಡಿಸುವ ಕಾರ್ಯಕ್ರಮ ನಡೆಸಲಾಯಿತು.

ಸಂಪನ್ಮೂಲ ವ್ಯಕ್ತಿಯಾಗಿ ಅಲ್ಟ್ರಾಟೆಕ್ ಸಿಮೆಂಟ್ ಪ್ರೈ. ಲಿ ನ ಉತ್ತರ ಕರ್ನಾಟಕ ಹಾಗೂ ಗೋವಾ ಭಾಗದ ತಾಂತ್ರಿಕ ಮುಖ್ಯಸ್ಥ ಅಶೋಕ ರೆಡ್ಡಿ ಕೊಲ್ಲೂರ್ ಆಗಮಿಸಿದ್ದರು. ನೀರು ಅತ್ಯಮೂಲ್ಯ ಸಂಪತ್ತಾಗಿದ್ದು, ಜಾಗರುಕತೆಯಿಂದ ಅಪವ್ಯಯವಾಗದಂತೆ ಬಳಸಬೇಕು ಎಂದರು.

ನೀರಿನ ಸಂರಕ್ಷಣೆ ಗೆ ಬಳಕೆ ಮಾಡಲಾಗುತ್ತಿರುವ ನೂತನ ತಂತ್ರಜ್ಞಾನದ ಕುರಿತಾಗಿ ತಿಳಿಸಿದರು. ಕೊಳಚೆ ನೀರಿನ ಮರುಶುದ್ಧಿಕರಣ ಹಾಗೂ ಸಮರ್ಪಕ ಬಳಕೆ ತಿಳಿಸುತ್ತ, ಭೂಮಿಯಲ್ಲಿ ಅಂತರ್ಜಲ ಹೆಚ್ಚಿಸಲು ತೆಗೆದುಕೊಳ್ಳಬೇಕಾದ ಉಪಕ್ರಮದ ಕುರಿತಾಗಿ ಬೆಳಕು ಚೆಲ್ಲಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ, ಮಹಾವಿದ್ಯಾಲಯವು ಅಂತರ್ಜಲ ಸಮೃದ್ಧಿಕರಣಕ್ಕೆ ಮಳೆ ಕೊಯ್ಲು ಅಳವಡಿಸಿ ಕೊಂಡಿದೆ ಎಂದರು. ಅಲ್ಟ್ರಾಟೇಕ್ ಸಿಮೆಂಟ್ ನ ಗಿರೀಶ್ ಪವಾರ್ ಹಾಗೂ ಪ್ರಸನ್ನ ಉಪ್ಪಿನ್ ಉಪಸ್ಥಿತರಿದ್ದರು. ಕಾಂಕ್ರೀಟ್ ಟೆಕ್ನಾಲಜಿ ವಿಷಯದಲ್ಲಿ ಅತೀ ಹೆಚ್ಚು ಅಂಕಗಳಿಸಿದ ಅಭಿಷೇಕ್ ಯಂತೂರ್ ಗೆ ಅಲ್ಟ್ರಾಟೇಕ್ ವತಿಯಿಂದ ಇದೇ ಸಂಧರ್ಭದಲ್ಲಿ ಸನ್ಮಾನಿಸಲಾಯಿತು. ವಿಭಾಗ ಮುಖ್ಯಸ್ಥ ಪ್ರೊ. ಹರ್ಷ ಜಾಧವ ಸ್ವಾಗತಿಸಿದರು. ಡಾ ಸ್ನೇಹಾ ಕುಲಕರ್ಣಿ ಮತ್ತು ಪ್ರೊ. ಸೀಮಾ ಬಸರಿಕಟ್ಟಿ ಕಾರ್ಯಕ್ರಮ ಸಂಯೋಜಿಸಿದ್ದರು. 180ಕ್ಕೂ ಅಧಿಕ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

